# ಎರಡು ಕಿರುಗತೆಗಳು

■ ಜಿ.ವಿ. ಆನಂದಮೂರ್ತಿ
ಕಲೆ: ಸಂತೋಷ್ ಸಸಿಹಿತ್ಲು



## ಮೊಳಕೆಯೊಡೆದ ಮಣ್ಣು

ಅಂದು ಶನಿವಾರ. ಶ್ರಾವಣದ ನಡುಹೊತ್ತು. ಎತ್ತ ನೋಡಿದರೂ ಕಪ್ಪು ಮೋಡಗಳು ಭೂಮಿಯನ್ನು ಕವಿದಿದ್ದವು. ಮೋಡಗಳ ನಡುವೆ ಸೂರ್ಯನ ಇರುವು ಕಾಣುತ್ತಿರಲಿಲ್ಲ. ರವಷ್ಟು ಚಳಿಯೂ ಇತ್ತು. ಶಾಲೆಯ ಮೈದಾನದಲ್ಲಿ ಎಲ್ಲರೂ ತಮ್ಮ ಗುರುವಿನ ಸುತ್ತ ನೆರೆದಿದ್ದರು. ಕನಸು ಕಾಣಲು ಸಿದ್ಧವಾಗಿದ್ದ ಅವರ ಎಳೆಯ ಕಣ್ಣುಗಳು ಕುತೂಹಲ ಮತ್ತು ಸಂತಸದ ಮೊರೆಹೋಗಿದ್ದವು. ಕೆಲವರು ಯಾವಾಗ ಮಳೆ ಬರುತ್ತದೋ ಎನ್ನುವ ಆತಂಕದಿಂದ ತಮಗೆ ಅರ್ಥವಾಗದ ಮೋಡಗಳನ್ನು ಆಗಾಗ್ಗೆ ತಲೆಯೆತ್ತಿ ನೋಡುತ್ತಿದ್ದರು. ಇನ್ನೂ ಕೆಲವರು ಅಲ್ಲಿಯೇ ಹಳ್ಳವೊಂದರಿಂದ ತಂದಿದ್ದ ಮಣ್ಣಿನೊಂದಿಗೆ ಆಟವಾಡುತ್ತಿದ್ದರು.

ಬಾಗದ ನೀಳ ದೇಹ, ಎಂತಹವರನ್ನೂ ಪ್ರೀತಿಯಿಂದಲೇ ಕಾಣಲು ತವಕಿಸುತ್ತಿದ್ದ ಪರಿಶುದ್ಧ ನೋಟ, ಸ್ವಚ್ಛವಾದ ಉಡುಪು, ಕೈಯಲ್ಲಿ ಯಾವಾಗಲೂ ಇರುತ್ತಿದ್ದ ಹೊತ್ತಗೆಗಳು ಇವೆಲ್ಲವೂ ಗುರುವಿನ ವ್ಯಕ್ತಿತ್ವಕ್ಕೆ ಮೆರಗು ತುಂಬಿದ್ದವು. ಅವರೊಡನೆ ಮಾತನಾಡುವುದೆಂದರೆ, ಅದು ಗಾಯಕ್ಕೆ ಮುಲಾಮು ಹಚ್ಚಿದಂತೆ! ಉರಿಗೊಳ್ಳಿಗೆ ನೀರು ಚಿಮುಕಿಸಿದಂತೆ! ದೀಪದಿಂದ ದೀಪವನ್ನು ಹಚ್ಚಿಸಿಕೊಂಡಂತೆ. ಆದ್ದರಿಂದಲೇ ಗುರುವಿನ ಹತ್ತಿರ ಯಾವಾಗಲೂ ವಿದ್ಯಾರ್ಥಿಗಳ ದಂಡೇ ನೆರೆದಿರುತ್ತಿತ್ತು.

ಎರೆಮಣ್ಣಿನೊಂದಿಗೆ ಆಟವಾಡುತ್ತಿದ್ದ ಆ ಹುಡುಗರು ಗುರುವಿನ ಬಳಿ ಬಂದು ಈ ಮಣ್ಣಿನಿಂದ ನಮಗೆ ಎತ್ತಿನ ಗಾಡಿ ಮಾಡಿಕೊಡಿ ಎಂದು ಕೇಳಿಕೊಂಡರೆ, ಮತ್ತೆ ಕೆಲವರು ನಮಗೆ ಯಾವುದಾದರೂ ಗೊಂಬೆ ಮಾಡಿಕೊಡಿ ಎಂದು ಕೇಳಿದರು. ಕೆಲವರು ನಮಗೆ ಒಂದು ಜೊತೆ ಎತ್ತುಗಳನ್ನು ಮಾಡಿಕೊಡಿ, ಇನ್ನೂ ಕೆಲವರು ನಮಗೆ ಫಲ ಕೊಡುವ ಮರ ಮಾಡಿಕೊಡಿ ಎಂದರು. ಹೀಗೆ ಅವರ ಕೋರಿಕೆ ಹಲವು ಬಗೆಯದಾಗಿತ್ತು. ಕೈಯೆಲ್ಲಾ ಮಣ್ಣು ಮಾಡಿಕೊಂಡು ನಿಂತಿದ್ದ ಒಬ್ಬಳು ಇದ್ದಕ್ಕಿದ್ದಂತೆ ಮುಂದೆ ಬಂದು 'ನಮಗೆ ಬುದ್ಧನನ್ನು ಮಾಡಿಕೊಡಿ' ಎಂದಳು. ಎಲ್ಲರಿಗೂ ಇದೇ ಸರಿಯೆನಿಸಿತು.

ಆಕೆ ಹೇಳಿದ್ದನ್ನು ಕೇಳಿದ ಗುರು 'ಆಗಲಿ, ಇಂದು ಮಣ್ಣಿನಿಂದ ಬುದ್ಧನನ್ನು ನಿಮ್ಮ ಕೈಯಾರ ನೀವೇ ಮಾಡಿ' ಎಂದು ಹೇಳಿ, ಇನ್ನಷ್ಟು ಎರೆಮಣ್ಣು ತರಿಸಿದರು. ಮಣ್ಣನ್ನು ಚೆನ್ನಾಗಿ ಕಲಸಿ ವಿದ್ಯಾರ್ಥಿಗಳ ಕೈಯಲ್ಲೇ ಅದಕ್ಕೊಂದು ಆಕಾರ ಕೊಡಿಸಿದರು. ಎಲ್ಲರೂ ಕೈಜೋಡಿಸಿದ್ದರಿಂದ ಒಂದು ಒರಟಾದ ಮೂರ್ತಿ ಸಿದ್ಧವಾಯಿತು. ಆ ಮೂರ್ತಿಗೆ ಅವರೆಲ್ಲ ಬುದ್ಧ ಎಂದು ಹೆಸರಿಟ್ಟರು. ಅದೊಂದು ಎರೆಮಣ್ಣಿನ ಅಸ್ಪಷ್ಟ ಆಕೃತಿಯಾಗಿತ್ತು.

ಅವರೆಲ್ಲಾ ತಾವು ಮಾಡಿದ್ದ ಬುದ್ಧಮೂರ್ತಿಯನ್ನು ನೋಡಿ ಸಂತಸಪಟ್ಟರು. ಬುದ್ಧಮೂರ್ತಿ ಸಂಪೂರ್ಣವಾಗಿ ಮುಗಿಯುವ ಹೊತ್ತಿಗೆ ಶಾಲೆ ಮುಗಿದಿತ್ತು. ಅಂದು ಬೆಳಗಿನ ತರಗತಿಗಳು ಇದ್ದುದ್ದರಿಂದ, ಅವರೆಲ್ಲ ಹಸಿದುಕೊಂಡೇ ಶಾಲೆಗೆ ಬಂದಿದ್ದರು. ತಾವೇ ನಿರ್ಮಿಸಿದ ಬುದ್ಧಮೂರ್ತಿಯನ್ನು ತಮ್ಮೊಳಗೆ ತುಂಬಿಕೊಂಡು ಆತುರಾತುರವಾಗಿ ತಮ್ಮ ಮನೆಗಳತ್ತ ಹೊರಟರು. ಹೋಗುವ ಮುನ್ನ ಮೂರ್ತಿಯನ್ನು ಮಳೆಗೆ ನೆನೆಯದ ಹಾಗೆ ಕೋಣೆಯೊಳಗೆ ಇಡೋಣವೇ? ಎಂದು ಗುರುಗಳಿಗೆ ಕೇಳಿದರು. 'ಬುದ್ಧ ಇರಬೇಕಾದದ್ದು ಬಯಲಲ್ಲೇ ಹೊರತು, ಕೋಣೆಯೊಳಗಲ್ಲ!' ಎಂದು ನಸುನಗುತ್ತಾ ಗುರು ಉತ್ತರಿಸಿದ. ಅಸ್ಪಷ್ಟ ರೂಪದ ಬುದ್ಧಮೂರ್ತಿ ಶಾಲೆಯ ಬಯಲಲ್ಲಿ ಏಕಾಂಗಿಯಾಗಿ ಉಳಿಯಿತು. ಶ್ರಾವಣ ಮಾಸವಾದ್ದರಿಂದ ಅಂದು ಸಂಜೆ ದೋಣೆದುಕ್ಲು ಮಳೆ ಸುರಿಯಿತು. ಶ್ರಾವಣದ ಜಿಗುಟು ಮಳೆಗೆ ಮರಗಳ ಎಲೆಗಳಿಂದ ಮಳೆನೀರು ಇನ್ನೂ ಅಮೃತದಂತೆ ಭೂಮಿಯ ಮೇಲೆ ತೊಟ್ಟಿಕ್ಕುತ್ತಿತ್ತು.

ಭಾನುವಾರದ ರಜೆ ಮುಗಿಸಿದ ವಿದ್ಯಾರ್ಥಿಗಳು ಸೋಮವಾರ ಶಾಲೆಗೆ ಬಂದರು. ಶನಿವಾರ ತಾವು ಮಾಡಿದ್ದ ಬುದ್ಧಮೂರ್ತಿಯನ್ನು ನೋಡಲು ಗುರುವನ್ನು ಕರೆದುಕೊಂಡು ಶಾಲೆಯ ಮೈದಾನಕ್ಕೆ ಕಾಲಿಟ್ಟರು. ಮಳೆಗೆ ಸಿಲುಕಿದ್ದ ಬುದ್ಧನ ಮೂರ್ತಿ ಸಂಪೂರ್ಣವಾಗಿ ಕದಡಿಹೋಗಿ ಮಣ್ಣು ಬಿಸಿಲಿಗೆ ಮೈವೊಡ್ಡಿಕೊಂಡು ಮಲಗಿತ್ತು. ಮಣ್ಣಿನ ಪದರುಗಳಿಂದ ಹೊರಬಂದ ಸಣ್ಣ ಸಣ್ಣ ಮೊಳಕೆಗಳು ಎಳೆಬಿಸಿಲಿಗೆ ಹೊಳೆಯುತ್ತಾ ತಲೆಯೆತ್ತಿ ನಿಂತಿದ್ದವು.

ಅಳುಮೋರೆ ಹಾಕಿಕೊಂಡು ನಿಂತಿದ್ದ ವಿದ್ಯಾರ್ಥಿಗಳು ಅಯ್ಯೋ, ನಾವು ಮಾಡಿದ ಬುದ್ಧ ಮಳೆನೀರಿನಲ್ಲಿ ಕರಗಿಹೋಗಿದೆ. ಕರಗಿದ ಮಣ್ಣಿನ ಮೇಲೆ ಮೊಳಕೆಗಳು ಎದ್ದಿವೆ. ಹಾಗಾದರೆ ನಮ್ಮ ಬುದ್ಧ ಎಲ್ಲಿ? ಎಂದು ಗುರುವನ್ನು ಕೇಳಿದರು. ಹುಸಿನಗೆಬೀರಿದ ಗುರು, ಮಣ್ಣಿನ ಮೇಲೆ ಎದ್ದಿದ್ದ ಮೊಳಕೆಗಳನ್ನು ತೋರಿಸಿ, 'ಬುದ್ಧನೆಂದರೆ ಮೂರ್ತಿಯಲ್ಲ! ವಸಂತದಂತೆ ಚಿಗುರುವ ಕರುಣೆಯ ಮೊಳಕೆ. ಇಂದು ಇಲ್ಲಿ ಚಿಗುರಿದೆ, ನಾಳೆ ನಿಮ್ಮೊಳಗೂ ಹೀಗೆಯೇ ಚಿಗುರುತ್ತದೆ' ಎಂದು ಹೇಳಿದ.

ಎಲ್ಲರ ತುಟಿಗಳ ಮೇಲೆ ಚೈತನ್ಯದಿಂದ ಕೂಡಿದ ಹೊಳಪಿನ ಕಿರುನಗೆ ಮೂಡಿತು. ■